


ಕೊಟ್ಟು ನೆರವಾದರು. ಇದಾದ ಮೇಲೊಂದು ದಿನ ಮದನ್‌ಜಿತ್ ಇಂಗ್ಲಿಷ್, ಗುಜರಾತಿ, ತಮಿಳು, ಹಿಂದಿ ಭಾಷೆಗಳಲ್ಲಿ 'ಇಂಡಿಯನ್ ಒಪೀನಿಯನ್' ಎಂಬ ವಾರಪತ್ರಿಕೆ ಶುರು ಮಾಡಬೇಕೆಂದು ಗಾಂಧೀಜಿಯ ಬಳಿ ಬಂದರು. 'ನಮ್ಮ ಅಂತರಂಗದ ಸತ್ವ ಹಾಗೂ ಶಕ್ತಿಯ ಆಧಾರದಿಂದ ನಡೆಯಬೇಕಾದ ಸತ್ಯಾಗ್ರಹದ ಹೋರಾಟ ಪತ್ರಿಕೆಯೊಂದರ ಬಲವಿಲ್ಲದೆ ನಡೆಯಲಾರದು; ಅದರಲ್ಲೂ ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿಗತಿ, ಬೆಳವಣಿಗೆಗಳ ಬಗ್ಗೆ ಜಗತ್ತಿನ ಇತರ ಭಾಗದ ಭಾರತೀಯರಿಗೆ ತಿಳಿಸಲು ನಮ್ಮದೇ ಆದ ಪತ್ರಿಕೆ ಅತ್ಯಗತ್ಯ' ಎಂಬುದು ಗಾಂಧೀಜಿಗೆ ಆಗಲೇ ಮನವರಿಕೆಯಾಗಿತ್ತು. 'ಇಂಡಿಯನ್ ಒಪೀನಿಯನ್'ಗೆ ಪ್ರತಿ ವಾರ ಬರೆಯಲು ಒಪ್ಪಿದ ಗಾಂಧೀಜಿ, ಅಗತ್ಯ ಬಿದ್ದರೆ ಧನಸಹಾಯ ಮಾಡಲೂ ತಯಾರಾದರು. 1903 ಜೂನ್ 4ನೆಯ ತಾರೀಕು 'ಇಂಡಿಯನ್ ಒಪೀನಿಯನ್' ಮೊದಲ ಸಂಚಿಕೆ ಹೊರಬಂತು.

ಇದಾದ ಮೇಲೊಂದು ದಿನ ಪತ್ರಿಕೆಯ ಕೆಲಸಕ್ಕೆಂದು ಜೋಹಾನ್ಸ್ ಬರ್ಗ್‌ನಿಂದ ಡರ್ಬಾನ್ಗೆ ಹೊರಟ ಗಾಂಧೀಜಿಗೆ ಜಾನ್ ರಸ್ಕಿನ್ ಬರೆದ **Unto This Last** ಪುಸ್ತಕವನ್ನು ಗೆಳೆಯ ಹೆನ್ರಿ ಪೊಲಾಕ್ ಕೊಟ್ಟರು. ಟ್ರೈನಿನಲ್ಲಿ ಪುಸ್ತಕ ಕೈಗೆತ್ತಿಕೊಂಡ ಗಾಂಧೀಜಿಗೆ ಅದನ್ನು ಕೆಳಗಿಡಲು ಮನಸ್ಸೇ ಬರಲಿಲ್ಲ. ತಮ್ಮ ನೋಟಕ್ರಮವನ್ನೂ, ಜೀವನ ಕ್ರಮವನ್ನೂ ಬದಲಿಸಿದ ಈ ಪುಸ್ತಕದ ಮೂರು ಕೇಂದ್ರ ನೋಟಗಳನ್ನು